# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ.)

ಕೆಎಸ್‌ಆರ್‌ಟಿಸಿ | ಬಿಎಂಟಿಸಿ | ಎನ್‌ಡಬ್ಲ್ಯೂಕೆಆರ್‌ಟಿಸಿ | ಕೆಕೆಆರ್‌ಟಿಸಿ

## KARNATAKA STATE ROAD TRANSPORT EMPLOYEES LEAGUE (R.)

KSRTC | BMTC | NWKRTC | KKRTC

Reg. No. ALCB-2/TU/P-956/2020-21


ರವರಿಗೆ, ದಿನಾಂಕ: 14/10/2025

ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಗಳು
ಕ.ರಾ.ರ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ
ನಂ.6, ಶಿರೂರ್ ಪಾರ್ಕ್, ಶೇಷಾದ್ರಿ ಪುರ
ಬೆಂಗಳೂರು: 560020

ಮಾನ್ಯರೆ,

**ವಿಷಯ: ಸಾರಿಗೆ ನೌಕರರ ನ್ಯಾಯಯುತ ಬೇಡಿಕೆಗಳ ಈಡೇರಿಸಿಕೊಳ್ಳಲು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಎಲ್ಲ ಸಂಘ/ಸಂಘಟನೆಗಳು ಒಮ್ಮತದಿಂದ ಒಗ್ಗೂಡಿ ಮುಂದಿನ ಹೋರಾಟಗಳನ್ನು ಹಮ್ಮಿಕೊಳ್ಳುವ ಬಗ್ಗೆ.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಕೂಟ(ರಿ)ದ ವತಿಯಿಂದ ತಮಗೆ ಸಾರಿಗೆ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ನಮ್ಮ ನಮ್ಮ ಸಂಘಟನೆಗಳ ಪ್ರತಿಷ್ಠೆಯನ್ನು ಸಮಸ್ತ ಸಾರಿಗೆ ನೌಕರರ ಒಳಿತಿಗಾಗಿ ಬದಿಗಿರಿಸಿ ಎಲ್ಲರು ಒಗ್ಗೂಡಿ ಶಾಂತಿಯುತ ಹೋರಾಟಗಳನ್ನು ಹಮ್ಮಿಕೊಳ್ಳುವ ಬಗ್ಗೆ ನಾವು ಈ ಹಿಂದೆ ತಮಗೆ ಮೂರು ಬಾರಿ ಪತ್ರಗಳನ್ನು ಬರೆದಿದ್ದರು ಸಹ, ಯಾಕೋ ನಿಮ್ಮಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ.

ಆದರಿಂದ ಪ್ರಸ್ತುತ ನಾಲ್ಕು ಸಾರಿಗೆ ನಿಗಮಗಳ ನೌಕರರ ಹಿತಾದೃಷ್ಟಿಯಿಂದ ನಾವೆಲ್ಲ ಒಗ್ಗೂಡಿ ಒಮ್ಮತದ ನಿರ್ಧಾರಗಳನ್ನು ಕೈಗೊಂಡು, ಹೋರಾಟಗಳನ್ನು ಹಮ್ಮಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿರುವ ಕಾರಣದಿಂದ, ಎಲ್ಲ ಸಂಘ/ಸಂಘಟನೆಗಳು ಒಗ್ಗೂಡಿ ತುರ್ತಾಗಿ ಸಭೆ ಮಾಡುವ ಅವಶ್ಯಕತೆ ಇದ್ದು, ಸಭೆ ಆಯೋಜನೆಗೆ (ಸಂಘಟನೆಗಳ ಕಛೇರಿಗಳನ್ನು ಹೊರತು ಪಡಿಸಿ) ಸ್ಥಳ ಹಾಗೂ ದಿನಾಂಕವನ್ನು ತಾವುಗಳು ನಿಗದಿಪಡಿಸಿದ್ದರು ಸರಿ, ಅಥವಾ ನಮಗೆ ನಿಗದಿ ಮಾಡುವ ಜವಾಬ್ದಾರಿ ನೀಡಿದರು ಸರಿ, ಸಮಸ್ತ ಸಾರಿಗೆ ನೌಕರರ ಒಳಿತಿಗಾಗಿ ನಾವು ಸಿದ್ದರಿದ್ದೇವೆ ತಿಳಿಸುತ್ತಾ, ತಮ್ಮ ಮರು ಉತ್ತರದ ನಿರೀಕ್ಷೆಯಲ್ಲಿದ್ದೇವೆ.

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

Chandrashekhar R

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ(ರಿ.)

ರಬ
14-10.2025


#54, 6th Cross, Near Police Station, Wilson Garden, Bengaluru - 560027
...@gmail.com | chandhucharu02@gmail.com